ಸಿದ್ದಾಪುರ ಕ್ಷೇತ್ರಾಭಿವೃದ್ಧಿ ಕಛೇರಿಯ ಬಗ್ಗೆ

೯೩. (೩) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಿರಸಿ, ಸಿದ್ದಾಪುರ ಕ್ಷೇತ್ರಾಭಿವೃದ್ಧಿ ಕಛೇರಿಯಲ್ಲಿನ ಸಿಬ್ಬಂದಿ ವರ್ಗದವರಿಗೆ ಸಂಬಳ ನಿಡಲು ವಾಹನಕ್ಕೆ ಇಂಧನ ತುಂಬಲು ಹಾಗೂ ಇತರ ಕೆಲಸಗಳನ್ನು ನಿರ್ವಹಿಸಲು ಹಣವಿಲ್ಲದೆ ತೊಂದರೆಯಾಗಿರುವುದು ಹಾಗೂ ಕೆಲಸಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ ಸಚಿವರು).—

ಅ) ಸರ್ಕಾರಕ್ಕೆ ದೊರಕಿರುವ ಮಾಹಿತಿ ಪ್ರಕಾರ ಸಂಬಂಧಪಟ್ಟ ಕಛೇರಿಗಳಲ್ಲಿ ಚೆಕ್ ಪುಸ್ತಕಗಳು ಇಲ್ಲದೇ ಇದ್ದುದರಿಂದ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗಿರಲಿಲ್ಲ.

ಆ) ಕಛೇರಿಗೆ ಚೆಕ್ ಪುಸ್ತಕ ಒದಗಿಸಿದ್ದು ಕಛೇರಿಯ ದಿನನಿತ್ಯದ ಕಾರ್ಯಕ್ರಮಗಳನ್ನು ಪುನಾರಂಭಿಸಲಾಗಿದೆ.

ಕೊಳವೆ ಬಾವಿಗಳ ಬಗ್ಗೆ

೯೪ (೪೦) ಶ್ರೀ ಪೀದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಹಳ್ಳಿಗಳಿಗೆ ಎಷ್ಟು ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ ಹಾಗೂ ಕೊಳವೆ ಬಾವಿಯನ್ನು ಹಾಕಲು ಅನುಸರಿಸುತ್ತಿರುವ ಆಧಾರವೇನು?

ಆ) ಈ ಕೊಳವೆ ಬಾವಿಗಳನ್ನು ಹಾಕಿಸಲು ಸರ್ಕಾರದವರು ವಿಚ್ಯುಮಾಡಿರುವ ಹಣವೆಷ್ಟು? ಹಾಗೂ ನೀರು ಬಾರದೆ ಎಷ್ಟು ಕೊಳವೆ ಬಾವಿಗಳು ವಿಫಲವಾಗಿವೆ?

ಇ) ಈ ಕೊಳವೆ ಬಾವಿಗಳನ್ನು ತಕ್ಷಣ ದುರಸ್ತಿ ಮಾಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಬ್ದುಲ್ ನಜೀರ್‌ಸಾಬ್, (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೧೯೮೬ರ ಮಾರ್ಚ್ ಅಂತ್ಯದವರೆಗೆ ಒಟ್ಟು ೧,೦೯,೭೫೭ ಕೊಳವೆ ಬಾವಿಗಳನ್ನು ಹಾಕಿಸಲಾಗಿದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಕೊಳವೆ ಬಾವಿಯನ್ನು ಕೊರೆಯಲು ಸರ್ಕಾರದ ನಿಯಮಾವಳಿಯನ್ನು ಗಮನದಲ್ಲಿ ಇಟ್ಟುಕೊಂಡು ಜಿಲ್ಲಾಭಿವೃದ್ಧಿ ಸಮಿತಿಯ ತೀರ್ಮಾನದ ಮೇರೆಗೆ ಕೊಳವೆ ಬಾವಿಗಳನ್ನು ಹಾಕಲು ೧/೪ ಹಳ್ಳಿಗಳನ್ನು ತೀರ್ಮಾನಿಸುತ್ತಾರೆ. ಆ ರೀತಿ ತೀರ್ಮಾನಿಸುವ ಹಳ್ಳಿಗಳಲ್ಲಿ ಸೂಕ್ತ ಜಾಗಗಳನ್ನು ಭೂ ಗರ್ಭ ಶಾಸ್ತ್ರಜ್ಞರು ನಿರ್ಧರಿಸಿದ ಜಾಗದಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗುತ್ತಿದೆ.

ಆ) ೧೯೮೬ರ ಮಾರ್ಚ್ ಅಂತ್ಯದವರೆಗೆ ಒಟ್ಟು ೧೪,೨೦೭–೫೨ ಲಕ್ಷರೂಗಳು ಖರ್ಚಾಗಿರುವುದು ಒಟ್ಟು ೧೫೫ ೬೬೭ ಬಾವಿಗಳು ವಿಫಲವಾಗಿದೆ.

ಇ) ಹಳೇ ಮಾದರಿಯ ಕೈ ಪಂಪುಗಳನ್ನು ತೆಗೆದು ಹೊಸ ಇಂಡಿಯಾ ಮಾರ್ಕ್-೨ ಕೈಯಾತ ಗಳನ್ನು ಅಳವಡಿಸಲಾಗಿದೆ. ಕೈ ಪಂಪುಗಳು ಕೆಟ್ಟಾಗ ಇದನ್ನು ಸರಿಪಡಿಸುವುದಕ್ಕಾಗಿ ವಿಶೇಷ ಸಿಬ್ಬಂದಿಯಿಂದ ಕೂಡಲೇ ಸರಿಪಡಿಸಲಾಗುತ್ತಿದೆ.